## ಕಥೆ

ಬೆಳಗ್ಗೆ ಲಾಯರ್ ಆಫೀಸಿಗೆ ಹೋದವಳಿಗೆ ಮತ್ತೆ ಕೂಡಲೇ ಮನೆಗೆ ಹೋಗುವ ಮನಸ್ಸಿರಲಿಲ್ಲ. ಆಟೋ ಬುಕ್ ಮಾಡಲೂ ಸುಸ್ತಾದ ಹಾಗನಿಸಿ ಸುತ್ತ ತಿರುಗಿದಾಗ 'ಅಯೋಧ್ಯಾ ಕೆಫೆ' ಬೋರ್ಡ್ ಕಾಣಿಸಿತ್ತು. ಕಾಫಿ ನೆಪದಲ್ಲಿ ಚೂರು ಹೊತ್ತು ಎಲ್ಲಾದರೂ ಕೂರಬಹುದು ಎನ್ನುವ ಸಾಧ್ಯತೆಯೇ ಸ್ವಲ್ಪ ಹಾಯೆನಿಸಿತು.

ದೊಡ್ಡಮ್ಮನ ಮನೆಗೂ ಹೋಗಿ ಎಷ್ಟೋ ದಿನವಾಗಿತ್ತು. ಅಲ್ಲಿ ಒಂದಿಷ್ಟು ಹೊತ್ತು ಕಳೆದು ಹೋದರೆ ನಿರಾಳ ಎನಿಸತೊಡಗಿತು. ದೊಡ್ಡಮ್ಮನ ಮನೆಯಲ್ಲಿ ಹಲವು ವರ್ಷಗಳನ್ನು ಕಳೆದಿದ್ದ ಪ್ರಿಯಾಳಿಗೆ ಸದ್ಯಕ್ಕೆ ಅದೊಂದೇ ನೆಮ್ಮದಿಯ ಜಾಗ ಎನಿಸಿತ್ತು. ಮಂಕಾಗಿ ಕಂಡರೆ ಇನ್ನು ದೊಡ್ಡಮ್ಮನ ನೂರೆಂಟು ಪ್ರಶ್ನೆ ಶುರುವಾಗುತ್ತೆ ಎನ್ನುವ ಅಳುಕಿನಿಂದ ಅಲ್ಲೇ ಮೊಬೈಲ್ ಸೆಲ್ಫ್ ಕ್ಯಾಮೆರಾ ತೆಗೆದು ಒಂದಿಷ್ಟು ಲಿಪ್‌ಸ್ಟಿಕ್ ಬಳಿದುಕೊಂಡು ಕೂದಲು ಸರಿಪಡಿಸಿಕೊಂಡು ಆಟೋ ಹತ್ತಿದ್ದಳು.

ಪ್ರಶಾಂತನ ತಾಯಿ ಸತ್ತು ವರ್ಷವಾಗಿತ್ತು. ಎಂದೋ ಶುರುವಾದ ಸಣ್ಣ ಕಿರಿಕಿರಿಯೊಂದು ಅವರ ಆರೋಗ್ಯದ ಸಮಸ್ಯೆಯಿಂದಾಗಿ ಮುಂದೂಡುತ್ತಾ ಇಲ್ಲಿವರೆಗೆ ಬಂದು ತಲುಪಿತ್ತು.

'ಬೇಗನೇ ಆಗತ್ತೆ ಮೇಡಂ. ನೀವು ಅಮೌಂಟ್ ಅರೇಂಜ್ ಮಾಡಿ, ಇಬ್ಬರಿಗೂ ಏನೂ ಬೇರೆ ಮನಸ್ತಾಪ ಇಲ್ಲ ಅನ್ನೋದಾದರೆ ಬೇಗ ಆಗತ್ತೆ' ಎಂದಿದ್ದರು ಲಾಯರ್.

'ಅಮ್ಮನ ಟ್ರೀಟ್‌ಮೆಂಟಿಗೆ ಈಗಾಗಲೇ ಖರ್ಚಾಗಿದೆ ಸಾಕಷ್ಟು, ನಿನಗೇ ಅಲ್ವಾ ಬೇಕಿರೋದು, ನೀನೇ ಅರೇಂಜ್ ಮಾಡ್ಕೊ. ಹೇಳಿದ ದಿನ ಬಂದು ಸೈನ್ ಮಾಡ್ತೀನಿ' ಪ್ರಶಾಂತ್ ಮುಖಕ್ಕೆ ಹೊಡೆದ ಹಾಗೆ ಹೇಳಿದ್ದ.

'ಎಲ್ಲಿಂದ ತರೋದು ಅಷ್ಟೊಂದು ಅಮೌಂಟ್. ಪಿಎಫ್ ದುಡ್ಡು ತೆಗೆಯಬೇಕೇನೋ...' ಪ್ರಿಯಾ ಲೆಕ್ಕ ಹಾಕೋದಿಕ್ಕೆ ಶುರು ಮಾಡಿದ್ದಳು.

'ಮೇಡಂ, ಲೊಕೇಷನ್ ಬಂತು' ಆಟೋ ಅಣ್ಣ ಎಚ್ಚರಿಸಿದ್ದಾಗ ಪ್ರಿಯಾಳ ಲೆಕ್ಕ ನಿಂತಿತ್ತು.

* * *

ದೊಡ್ಡಮ್ಮನ ಮನೆಯ ಕರೆಗಂಟೆ ಒತ್ತುವ ಹೊತ್ತಿಗೆ ಒಳಗಿಂದ ಅಕ್ಕನ ಧ್ವನಿ ಕೇಳಿಸಿತ್ತು.

ಥೋ... ಬರಲೇಬಾರದಿತ್ತು... ಇನ್ನು ದೊಡ್ಡಮ್ಮನ ವಾತ್ಸಲ್ಯದ ಬದಲು ಇವಳ ವ್ಯಂಗ್ಯ ಕೇಳೋದೇ ಗತಿ ನನಗೆ ಅಂದುಕೊಂಡು ಹೆಜ್ಜೆ ಹಿಂದಿಡುವಷ್ಟರಲ್ಲಿ ಅಕ್ಕ ಬಾಗಿಲು ತೆಗೆದಿದ್ದಳು.

'ಓ ನೀನಾ... ಬಾ ಬಾ. ಏನು ಅಪರೂಪಕ್ಕೆ?'

'ಈ ಕಡೆ ಬಂದಿದ್ದೆ ಕಣೇ, ಹಾಗೇ ಬಂದೆ... ನೀನೂ ಇರೋದು ಒಳ್ಳೆದೇ ಆಯ್ತು ನೋಡು'

'ಏನೇ ಬರ್ತಾ ಬರ್ತಾ ಸರೀ ಊದ್ತಾ ಇದೀಯಲ್ಲೇ? ಏನ್ ಗುಡ್ ನ್ಯೂಸಾ?'

'ಅಂಥದ್ದೆಲ್ಲ ಏನಿಲ್ವೇ, ನಿಂದು ಇದೇ ಆಯ್ತು. ನೀ ಹೇಗಿದೀ? ಮಕ್ಕಳು? ಭಾವ? ಎಲ್ಲ ಆರಾಮಾ?'

'ಹ್ಞೂ ಕಣೇ, ಮಕ್ಕಳು, ಭಾವನ ಜೊತೆ ಇಲ್ಲೇ ಪಾರ್ಕಿಗೆ ಹೋಗಿದಾರೆ, ಬೆಳಗ್ಗೆ ಹೊರಡಬೇಕು. ಮತ್ತೆ, ಆಯ್ತಾ ಊಟ?'

'ಈಗಷ್ಟೇ ಆಯ್ತು ನೋಡು' ಮನೆಗೆ ಬಂದೋರಿಗೆ ಊಟ ಮಾಡ್ತೀಯಾ ಅನ್ನೋ ಬದಲು ಊಟ ಆಯ್ತಾ ಅನ್ನೋದನ್ನ ಇವಳಿಂದ್ಲೇ ಕಲೀಬೇಕು ಎಂದುಕೊಳ್ಳುತ್ತಾ ಕುಳಿತಳು...

ಅಡುಗೆ ಮನೆಯಿಂದ ಕೈ ಒರೆಸಿಕೊಳ್ಳುತ್ತಾ ದೊಡ್ಡಮ್ಮ ಹೊರಬಂದರು.

'ಏನೋ ಪುಟ್ಟಾ, ಎಷ್ಟೊಂದು ದಿನ ಆಯ್ತು ನೀ ಬಂದು, ಹೇಗಿದ್ದೀ?'.

'ನಂಗೇನು ದೊಡ್ಡಮ್ಮ, ಆರಾಮಾಗಿದೀನಿ, ಹಾಗೇ ನಿಮ್ಮನ್ನ ಮಾತಾಡಿಸಿಕೊಂಡು ಹೋಗುವಾ ಅಂತ ಬಂದೆ'.

'ಒಂದು ಮಗು ಮಾಡ್ಕೊಳ್ಳೇ, ಬರೀ ಒಂದೊಂದೇ ಆಗೋಯ್ತು ಈಗಿನವರದ್ದು' ಅಕ್ಕನ ಮಾತು ಮತ್ತೆ ಶುರುವಾಗಿತ್ತು.

'ಅದು ಹೇಗೇ ಆಗತ್ತೆ? ಯಾರೇ ನೋಡ್ಕೊತಾರೆ ಮಗೂನ? ಕೆಲಸ ಬಿಡೋಕಾಗಲ್ಲ, ಡೇ ಕೇರ್‌ನಲ್ಲಿ ಮಗೂನ ಬೆಳೆಸೋಕೆ ಮಕ್ಕಳು ಯಾಕೇ ಬೇಕು?' ಪ್ರಿಯಾ ಸಿಡುಕಿದಳು.

'ಆಗತ್ತೆ ಕಣೇ, ಕೂಲಿ ಕೆಲಸ ಮಾಡೋರೂ ನೋಡು ಎರಡು ಮೂರು ಮಕ್ಕಳನ್ನ ಮಾಡ್ಕೊಳಲ್ವಾ'

ಪ್ರಿಯಾಳಿಗೆ ಇನ್ನು ಮಾತಾಡೋದು ವ್ಯರ್ಥ ಅನಿಸಿತು.